# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2206**
**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ : 26/03/2026.**
**ಉತ್ತರಿಸುವ ಸಚಿವರು : ಗೃಹ ಸಚಿವರು.**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ದಾಖಲಾಗಿರುವ ಒಟ್ಟು ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; ಈ ಪೈಕಿ ಎಷ್ಟು ಪ್ರಕರಣಗಳನ್ನು ಯಶಸ್ವಿಯಾಗಿ ಭೇದಿಸಿ ಆರೋಪಿಗಳನ್ನು ಬಂಧಿಸಲಾಗಿದೆ: (ವರ್ಷವಾರು ವಿವರ ನೀಡುವುದು)</td><td>ಬೀದರ್ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಒಟ್ಟು 80 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಸದರಿ ಪ್ರಕರಣಗಳಲ್ಲಿ ಒಟ್ಟು 03 ಪ್ರಕರಣಗಳನ್ನು ಭೇದಿಸಿ 03 ಆರೋಪಿಗಳನ್ನು ಬಂಧಿಸಲಾಗಿದೆ.<br><br><u>ಪ್ರಕರಣಗಳ ವಿವರ</u>
<table>
<tr><th>ವರ್ಷ</th><th>ದಾಖಲಾದಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ.</th><th>ಭೇದಿಸಿದ ಸೈಬರ್ ಪ್ರಕರಣಗಳ ಸಂಖ್ಯೆ</th><th>ಬಂಧಿಸಿದ ಆರೋಪಿಗಳ ಸಂಖ್ಯೆ.</th></tr>
<tr><td>2023</td><td>21</td><td>-</td><td>-</td></tr>
<tr><td>2024</td><td>36</td><td>03</td><td>03</td></tr>
<tr><td>2025</td><td>22</td><td>-</td><td>-</td></tr>
<tr><td>2026 (ಫೆಬ್ರವರಿ)</td><td>1</td><td>-</td><td>-</td></tr>
</table></td></tr>
<tr><td>ಆ</td><td>ದಾಖಲಾದ ಪ್ರಕರಣಗಳಲ್ಲಿ ಒಟಿಪಿ (OTP) ಹಂಚಿಕೆ, ಆನ್ ಲೈನ್ ಬ್ಯಾಂಕಿಂಗ್ ವಂಚನೆ, ಲಕ್ಕಿ ಡ್ರಾ ಹಾಗೂ ಉದ್ಯೋಗದ ಆಮಿಷದ ಮೂಲಕ ನಡೆದ ಮೋಸದ ಪ್ರಕರಣಗಳ ಪ್ರಮಾಣ ಎಷ್ಟು; ಸಾರ್ವಜನಿಕರು ಕಳೆದುಕೊಂಡ ಹಣದಲ್ಲಿ ಎಷ್ಟು ಮೊತ್ತವನ್ನು ಮರುಪಡೆಯಲು ಪೊಲೀಸ್ ಇಲಾಖೆ ಯಶಸ್ವಿಯಾಗಿದೆ;</td><td>ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಒಟ್ಟು 80 ಪ್ರಕರಣಗಳಲ್ಲಿ ಒಟಿಪಿ (OTP) ಹಂಚಿಕೆ, ಆನ್‌ಲೈನ್ ಬ್ಯಾಂಕಿಂಗ್ ವಂಚನೆ, ಲಕ್ಕಿ ಡ್ರಾ ಹಾಗೂ ಉದ್ಯೋಗ ಆಮಿಷದ ಮೂಲಕ ಸಾರ್ವನಿಕರಿಗೆ ವಂಚಿಸಲಾದ ಒಟ್ಟು ರೂ. 7,81,32,454/- ಗಳಲ್ಲಿ ಸಾರ್ವಜನಿಕರಿಗೆ ರೂ 1,35,23,281/- ಗಳನ್ನು ಹಿಂದಿರುಗಿಸುವಲ್ಲಿ ಯಶಸ್ವಿಯಾಗಿರುತ್ತಾರೆ.<br><br>
<table>
<tr><th>ಸೈಬರ್ ಅಪರಾಧ</th><th>2023</th><th>2024</th><th>2025</th><th>2026 (ಫೆಬ್ರವರಿ)</th></tr>
<tr><td>ಒಟಿಪಿ (OTP) ಹಂಚಿಕೆ ಪ್ರಕರಣಗಳ ಸಂಖ್ಯೆ.</td><td>2</td><td>5</td><td>1</td><td>-</td></tr>
<tr><td>ಆನ್‌ಲೈನ್ ಬ್ಯಾಂಕಿಂಗ್ ವಂಚನೆ ಪ್ರಕರಣಗಳ ಸಂಖ್ಯೆ</td><td>14</td><td>29</td><td>18</td><td>1</td></tr>
<tr><td>ಲಕ್ಕಿ ಡ್ರಾ ಹಾಗೂ ಉದ್ಯೋಗದ ಆಮಿಷದ ಮೂಲಕ ನಡೆದ ಮೋಸದ ಪ್ರಕರಣಗಳ ಸಂಖ್ಯೆ</td><td>5</td><td>2</td><td>3</td><td>-</td></tr>
<tr><td>ಸಾರ್ವಜನಿಕರು ಕಳೆದುಕೊಂಡ ಹಣದ ಮೊತ್ತ ರೂ.</td><td>16408297</td><td>19369864</td><td>42235856</td><td>118437</td></tr>
<tr><td>ಸಾರ್ವಜನಿಕರಿಗೆ ಹಿಂತಿರುಗಿಸಿದ ಹಣದ ಮೊತ್ತ ರೂ.</td><td>4384263</td><td>823480</td><td>8315538</td><td>-</td></tr>
</table></td></tr>
</table>

<table>
<tr>
<td>ಇ</td>
<td>ಜಿಲ್ಲಾಮಟ್ಟದಲ್ಲಿ ಸೈಬರ್ ಅಪರಾಧಗಳ ತನಿಖೆಗಾಗಿ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿರುವ Cyber Economic and Narcotics Police Station (CEN) ಪೊಲೀಸ್ ಠಾಣೆ ಸುಸಜ್ಜಿತವಾಗಿದೆಯೇ; ಈ ಠಾಣೆಯಲ್ಲಿ ಆಧುನಿಕ ಸೈಬರ್ ಫೊರೆನ್ಸಿಕ್ (Cyber Forensics) ತಾಂತ್ರಿಕ ಸೌಲಭ್ಯಗಳು ಲಭ್ಯವಿದೆಯೇ;</td>
<td>"ಬೀದರ್ ಜಿಲ್ಲೆಯಲ್ಲಿ ಸೈಬರ್ ಅಪರಾಧಗಳ ಪರಿಣಾಮಕಾರಿ ತನಿಖೆಗಾಗಿ ಸೈಬರ್ ಕ್ರೈಂ ಪೊಲೀಸ್ ಠಾಣೆಯನ್ನು ಸೃಜಿಸಲಾಗಿರುತ್ತದೆ ಹಾಗೂ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನೇಮಿಸಿ ಕ್ರಮಬದ್ಧವಾಗಿ ಕಾರ್ಯನಿರ್ವಹಿಸಲಾಗುತ್ತದೆ. ಸೈಬರ್ ಅಪರಾಧ ಪ್ರಕರಣಗಳ ದಾಖಲಾತಿ, ತನಿಖೆ ಹಾಗೂ ತಾಂತ್ರಿಕ ವಿಶ್ಲೇಷಣೆಗಳನ್ನು ಸಮರ್ಥವಾಗಿ ನಿರ್ವಹಿಸಲಾಗುತ್ತಿದೆ.<br><br>ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಡಿ.ವೈ.ಎಸ್.ಪಿ. ಹುದ್ದೆಯ ಅಧಿಕಾರಿ Station House Officer (SHO) ಆಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಫೋರೆನ್ಸಿಕ್ ತಾಂತ್ರಿಕ ಸೌಲಭ್ಯವನ್ನು ತನಿಖೆಯಲ್ಲಿ ಬಳಸುವ ಮತ್ತು ಅಳವಡಿಸುವ ಬಗ್ಗೆ ಕಾಲಕಾಲಕ್ಕೆ ತರಬೇತಿ ನೀಡಲಾಗಿರುತ್ತದೆ. ಸೈಬರ್ ಅಪರಾಧ ಪ್ರಕರಣಗಳ ತನಿಖೆಯಲ್ಲಿ ಸೈಬರ್ ಫೋರೆನ್ಸಿಕ್ (Cyber Forensics) ತಾಂತ್ರಿಕ ಸೇವೆಯ ಅಗತ್ಯವಿದ್ದಲ್ಲಿ, ಸಿಐಡಿ ಸೈಬರ್ ಫೋರೆನ್ಸಿಕ್ ವಿಭಾಗದಿಂದ ಪಡೆದುಕೊಳ್ಳಲಾಗುತ್ತಿದೆ.</td>
</tr>
<tr>
<td>ಈ</td>
<td>ಗ್ರಾಮೀಣ ಭಾಗದ ಜನರಿಗೆ ಸೈಬರ್ ವಂಚನೆಗಳ ಬಗ್ಗೆ ಜಾಗೃತಿ ಮೂಡಿಸಲು ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ 'ಸೈಬರ್ ಜಾಗೃತಿ' ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ಶಾಲೆ-ಕಾಲೇಜು ವಿದ್ಯಾರ್ಥಿಗಳಿಗೆ ಈ ಕುರಿತು ಶಿಕ್ಷಣ ನೀಡುವ ವಿಶೇಷ ಯೋಜನೆ ಸರ್ಕಾರದ ಮುಂದಿದೆಯೇ,</td>
<td>ಬೀದರ್ ಜಿಲ್ಲೆಯ ಗ್ರಾಮೀಣ ಭಾಗದ ಜನರಿಗೆ ಸೈಬರ್ ವಂಚನೆಗಳ ಬಗ್ಗೆ ಜಾಗೃತಿ ಮೂಡಿಸಲು ಜಿಲ್ಲಾ ವ್ಯಾಪ್ತಿಯ ಗ್ರಾಮಗಳಲ್ಲಿ ಮತ್ತು ಶಾಲಾ-ಕಾಲೇಜುಗಳಲ್ಲಿ ಈಗಾಗಲೇ ಸೈಬರ್ ಜಾಗೃತಿ ಕಾರ್ಯಕ್ರಮಗಳನ್ನು ಇಲಾಖಾ ವತಿಯಿಂದ ಕೈಗೊಳ್ಳಲಾಗುತ್ತಿದೆ.<br><br><u>ಬೀದರ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಸೈಬರ್ ವಂಚನೆ ಬಗ್ಗೆ ಜಾಗೃತಿ ಮೂಡಿಸಲಾದ ಕಾರ್ಯಕ್ರಮಗಳ ವಿವರಗಳು ಈ ಕೆಳಕಂಡಂತಿದೆ</u>:-
<table>
<tr><th>ವರ್ಷ</th><th>ಜಾಗೃತಿ ಮೂಡಿಸಿದ ಗ್ರಾಮಗಳ ಸಂಖ್ಯೆ</th><th>ಜಾಗೃತಿ ಮೂಡಿಸಿದ ಜನರ ಸಂಖ್ಯೆ</th><th>ಜಾಗೃತಿ ಮೂಡಿಸಿದ ಶಾಲಾ/ ಕಾಲೇಜುಗಳ ಸಂಖ್ಯೆ</th><th>ಜಾಗೃತಿ ಮೂಡಿಸಿದ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2024</td><td>389</td><td>58365</td><td>315</td><td>20320</td></tr>
<tr><td>2025</td><td>405</td><td>60750</td><td>430</td><td>38505</td></tr>
<tr><td>2026</td><td>215</td><td>10515</td><td>205</td><td>6750</td></tr>
</table>
ಅದರಂತೆ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಜಿಲ್ಲಾ ಸೈಬರ್ ಠಾಣೆಯಿಂದ ಸೈಬರ್ ಅಪರಾಧಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಲ್ಲದೇ ಪೊಲೀಸ್ ಇಲಾಖೆಯಿಂದ ಜಾರಿಗೆ ತಂದಿರುವ ಮನೆ ಮನೆಗೆ ಪೊಲೀಸ್ ಪರಿಕಲ್ಪನೆಯಲ್ಲಿ ಖುದ್ದಾಗಿ</td>
</tr>
</table>

| | | |
|---|---|---|
| | | ಗ್ರಾಮಗಳ ಮನೆಗಳಿಗೆ ಭೇಟಿ ನೀಡಿ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳು ಸಮುದಾಯದ ಜನರು ಮತ್ತು ಮಕ್ಕಳಲ್ಲಿ ಸೈಬರ್ ಪ್ರಕರಣಗಳು ಸೇರಿದಂತೆ ಇತರೆ ಅಪರಾಧ ಪ್ರಕರಣಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.<br><br>ಕರ್ನಾಟಕ ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸಿರುವ **"ಅಕ್ಕ ಪಡೆ"** ತಂಡದವರು ಜಿಲ್ಲಾ ಮಟ್ಟದಲ್ಲಿ ಶಾಲಾ ಕಾಲೇಜು ಮತ್ತು ವಸತಿ ನಿಲಯಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸೈಬರ್ ಅಪರಾಧ ಪ್ರಕರಣಗಳು ಸೇರಿದಂತೆ ಮಹಿಳೆಯರ ಸುರಕ್ಷತೆ ಬಗ್ಗೆ ಜಾಗೃತಿ ಕಾರ್ಯವನ್ನು ನಿರ್ವಹಿಸುತ್ತಿರುತ್ತಾರೆ. |
| ಉ | ಸಂಕೀರ್ಣ ಆನ್‌ಲೈನ್ ವಂಚನೆ ಪ್ರಕರಣಗಳನ್ನು ಪತ್ತೆಹಚ್ಚಲು ಮತ್ತು ಹಣದ ವ್ಯವಹಾರವನ್ನು ತಕ್ಷಣವೇ ಸ್ಥಗಿತಗೊಳಿಸಲು (Freeze) ಜಿಲ್ಲಾಪೊಲೀಸ್ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ 'ವಿಶೇಷ ತನಿಖಾ ತಂಡ (Special Task Force) ರಚಿಸಲಾಗಿದೆಯೇ; ಈ ನಿಟ್ಟಿನಲ್ಲಿ National Cyber Crime Reporting Portal (1930 ಸಹಾಯವಾಣಿ) ಜೊತೆ ಸಮನ್ವಯ ಕೈಗೊಳ್ಳಲಾಗಿದೆಯೇ? | ಸಂಕೀರ್ಣ ಆನ್‌ಲೈನ್ ವಂಚನೆ ಪ್ರಕರಣಗಳನ್ನು ಪತ್ತೆ ಹಚ್ಚಲು ಮತ್ತು ಹಣದ ವ್ಯವಹಾರವನ್ನು ತಕ್ಷಣವೇ ಸ್ಥಗಿತಗೊಳಿಸಲು (Freeze) ಜಿಲ್ಲೆಯಲ್ಲಿ ಪೊಲೀಸ್ ಉಪಾಧೀಕ್ಷಕರ ನೇತೃತ್ವದಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆಯನ್ನು ರಚಿಸಲಾಗಿದೆ. ಒಂದುವೇಳೆ ಗಂಭೀರ ಪ್ರಕರಣಗಳು ದಾಖಲಾದಲ್ಲಿ ಜಿಲ್ಲಾ ಮಟ್ಟದಲ್ಲಿ ಪೊಲೀಸ್ ಅಧೀಕ್ಷಕರು ವಿಶೇಷ ತಂಡಗಳನ್ನು ರಚಿಸಬಹುದಾಗಿರುತ್ತದೆ.<br><br>ಸಂಕೀರ್ಣ ಆನ್‌ಲೈನ್ ವಂಚನೆ ಪ್ರಕರಣಗಳನ್ನು ಪತ್ತೆಹಚ್ಚಲು ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಆರ್ಥಿಕ ಸ್ವರೂಪದ ಸೈಬರ್ ಅಪರಾಧಗಳನ್ನು ತಡೆಗಟ್ಟಲು ಉಚಿತ ಸಹಾಯವಾಣಿ **(ಟೋಲ್ ಫ್ರೀ) ಸಂ: 1930** ಜೊತೆ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಲಾಗುತ್ತಿದೆ. |

**ಸಂಖ್ಯೆ: ಹೆಚ್‌ಡಿ 43 ಪಿಸಿಕ್ಯೂ 2026**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು